# Startup India International Summit

January 14, 2021

---

## ಸ್ಟಾರ್ಟ್‌ಅಪ್ ಇಂಡಿಯಾ ಅಂತರರಾಷ್ಟ್ರೀಯ ಸಮ್ಮೇಳನ

14 ಜನವರಿ 2021

1. 'ಪ್ರಾರಂಭ್' - ಸ್ಟಾರ್ಟ್‌ಅಪ್ ಇಂಡಿಯಾ ಅಂತರರಾಷ್ಟ್ರೀಯ ಸಮ್ಮೇಳನವನ್ನು ಕೈಗಾರಿಕಾ ಮತ್ತು ಆಂತರಿಕ ವ್ಯಾಪಾರ ಪ್ರಚಾರ ಇಲಾಖೆ (ಡಿಪಿಐಐಟಿ) 15-16 ಜನವರಿ 2021 ರಂದು ವರ್ಚುಯಲ್ ಮಾಧ್ಯಮದ ಮೂಲಕ ಆಯೋಜಿಸುತ್ತಿದೆ. ದೇಶದ ಪ್ರತಿಯೊಂದು ಮೂಲೆಯಲ್ಲೂ ಉದ್ಯಮಶೀಲತೆಯ ಮನೋಭಾವವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಸ್ಟಾರ್ಟ್‌ಅಪ್ ಇಂಡಿಯಾ ಉಪಕ್ರಮದ 5ನೇ ವರ್ಷಾಚರಣೆಯನ್ನು ಗುರುತಿಸಲು ಈ ಸಮ್ಮೇಳನವನ್ನು ಆಯೋಜಿಸಲಾಗುತ್ತಿದೆ. ಮಾನ್ಯ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು ಜನವರಿ 15 ರಂದು ಈ ಸಮ್ಮೇಳನವನ್ನು ಉದ್ಘಾಟಿಸಲಿದ್ದು, ಮಾನ್ಯ ಪ್ರಧಾನ ಮಂತ್ರಿಯವರು ಜನವರಿ 16 ರಂದು ಸಮ್ಮೇಳನದ ಮುಕ್ತಾಯದ ಅಧಿವೇಶನವನ್ನುದ್ದೇಶಿಸಿ ಮಾತನಾಡಲಿದ್ದಾರೆ.

2. ಪ್ರಾರಂಭ್ ಮೂಲಕ ಉನ್ನತ ನೀತಿ ನಿರೂಪಕರು, ಉದ್ಯಮ, ಶಿಕ್ಷಣ ತಜ್ಞರು, ಹೂಡಿಕೆದಾರರು, ಸ್ಟಾರ್ಟ್‌ಅಪ್‌ಗಳು ಮತ್ತು ಪ್ರಪಂಚದಾದ್ಯಂತದ ಎಲ್ಲಾ ಪಾಲುದಾರರನ್ನು ಒಟ್ಟುಗೂಡಿಸುವ ನಿರೀಕ್ಷೆಯಿದೆ. ಇದರ ಅಧಿವೇಶನಗಳು, ವಿಶ್ವದಾದ್ಯಂತದ ಅತ್ಯುತ್ತಮ ಪರಿಸರ ವ್ಯವಸ್ಥೆಯ ಕಾರ್ಯವೈಖರಿಯನ್ನು ಚರ್ಚಿಸುವುದರ ಹೊರತಾಗಿ, ಭಾರತದಲ್ಲಿ ನಾವೀನ್ಯತೆ ಆಧಾರಿತ ಉದ್ಯಮಶೀಲತೆಯನ್ನು ಉತ್ತೇಜಿಸಲು ಮತ್ತು ಅದರ ಆಳವನ್ನು ಪ್ರದರ್ಶಿಸಲು ವಿನ್ಯಾಸಗೊಳಿಸಲಾಗಿದೆ. ಜಾಗತಿಕ ಬಂಡವಾಳವನ್ನು ಭಾರತದ ಆರಂಭಿಕ ಉದ್ಯಮಗಳಿಗೆ ಆಕರ್ಷಿಸುವುದು, ದೇಶೀಯ ಬಂಡವಾಳವನ್ನು ಹೆಚ್ಚಿಸುವುದು, ನಮ್ಮ ಆರಂಭಿಕ ಉದ್ಯಮಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಗಳನ್ನು ತಲುಪಲು ಅವಕಾಶಗಳನ್ನು ನೀಡುವುದು ಹಾಗೂ ಅವುಗಳನ್ನು ಸರಳೀಕರಿಸುವ ಮೂಲಕ ನೀತಿ ನಿಬಂಧನೆಗಳನ್ನು ಅಭಿವೃದ್ಧಿಪಡಿಸುವುದು ಸಮ್ಮೇಳನದ ಉದ್ದೇಶವಾಗಿದೆ.

3. ಸಮ್ಮೇಳನದ ಮೊದಲ ದಿನ ಬಿಮ್‌ಸ್ಟೆಕ್ ಸ್ಟಾರ್ಟ್‌ಅಪ್ ಕಾನ್‌ಕ್ಲೇವ್ ಅನ್ನು ಆಯೋಜಿಸಲು ಮೀಸಲಾಗಿರುತ್ತದೆ. ಈ ಪ್ರದೇಶದ ಉದ್ಯಮಿಗಳಲ್ಲಿ ಸಂಪರ್ಕವನ್ನು ಹೆಚ್ಚಿಸುವ ಉದ್ದೇಶದಿಂದ ಆಗಸ್ಟ್ 2018ರಲ್ಲಿ ಕಠ್ಮಂಡುವಿನಲ್ಲಿ ನಡೆದ 4ನೇ ಬಿಮ್‌ಸ್ಟೆಕ್ ಸಮ್ಮೇಳನದಲ್ಲಿ ಮಾನ್ಯ ಪ್ರಧಾನ ಮಂತ್ರಿಯವರು ಮಾಡಿದ ಪ್ರಕಟಣೆಗಳಲ್ಲಿ ಇದು ಒಂದಾಗಿದೆ. ಸಮ್ಮೇಳನದಲ್ಲಿ ಬಾಂಗ್ಲಾದೇಶ, ಭೂತಾನ್, ಮ್ಯಾನ್ಮಾರ್, ನೇಪಾಳ ಮತ್ತು ಶ್ರೀಲಂಕಾದಿಂದ ಸಚಿವರು ಮತ್ತು ಹಿರಿಯ ಅಧಿಕಾರಿಗಳು, ಥೈಲ್ಯಾಂಡ್‌ನ ರಾಷ್ಟ್ರೀಯ ಇನ್ನೋವೇಶನ್ ಏಜೆನ್ಸಿಯ ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ಬಿಮ್‌ಸ್ಟೆಕ್‌ನ ಪ್ರಧಾನ ಕಾರ್ಯದರ್ಶಿ ಭಾಗವಹಿಸಲಿದ್ದಾರೆ.

4. ಸಮ್ಮೇಳನದ ಎರಡು ದಿನಗಳಲ್ಲಿ, ಸ್ಟಾರ್ಟ್‌ಅಪ್ ಮತ್ತು ಇತರ ಮಧ್ಯಸ್ಥಗಾರರ ಭಾಗವಹಿಸುವಿಕೆಯೊಂದಿಗೆ ವಿವಿಧ ವಿಷಯಗಳ ಕುರಿತು ಪ್ಯಾನೆಲ್ ಚರ್ಚೆ ನಡೆಯಲಿದೆ. ಉತ್ತಮ ಅಭ್ಯಾಸಗಳ ಹಂಚಿಕೆ, ಜ್ಞಾನ ವಿನಿಮಯ ಕಾರ್ಯಾಗಾರ, ಬಹುಪಕ್ಷೀಯ ಇನ್ಕ್ಯುಬೇಟರ್ ಪ್ರೋಗ್ರಾಂ ಮತ್ತು ಸಾಮಾಜಿಕ ನಾವೀನ್ಯತೆಯನ್ನು ಉತ್ತೇಜಿಸುವಂತಹ ವಿಷಯಗಳ ಕುರಿತು ಏಳು ಪ್ಯಾನೆಲ್ ಚರ್ಚೆಗಳನ್ನು ಬಿಮ್‌ಸ್ಟೆಕ್ ಸ್ಟಾರ್ಟ್‌ಅಪ್ ಕಾನ್‌ಕ್ಲೇವ್ ಒಳಗೊಂಡಿರುತ್ತದೆ. ವರ್ಚುಯಲ್ ಸ್ಟಾರ್ಟ್‌ಅಪ್ ಪ್ರದರ್ಶನದಲ್ಲಿ ಬಿಮ್‌ಸ್ಟೆಕ್ ದೇಶಗಳ 100 ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು ಭಾಗವಹಿಸಲಿವೆ. ಬಿಮ್‌ಸ್ಟೆಕ್ ದೇಶಗಳು ಸೇರಿದಂತೆ ಆಯ್ದ ಸ್ಟಾರ್ಟ್‌ಅಪ್ ಗಳಿಗೆ ಮುಕ್ತಾಯದ ಅಧಿವೇಶನದಲ್ಲಿ ಮಾನ್ಯ ಪ್ರಧಾನ ಮಂತ್ರಿಯೊಂದಿಗೆ ಸಂವಹನ ನಡೆಸಲು ಅವಕಾಶವಿದೆ.

5. ಈ ವರ್ಚುಯಲ್ ಸಮ್ಮೇಳನದ ಮೂಲಕ, ವಿಶ್ವದಾದ್ಯಂತ ಮತ್ತು ಭಾರತದಿಂದ 200 ಕ್ಕೂ ಹೆಚ್ಚು ಭಾಷಣಕಾರರು ಒಗ್ಗೂಡಿ, ತಾಂತ್ರಿಕ, ನಾವೀನ್ಯತೆ, ನೀತಿ ಬಲಪಡಿಸುವಿಕೆ ಮತ್ತು ಉಪಕ್ರಮಗಳ ಬಗ್ಗೆ ಚರ್ಚಿಸುತ್ತಾರೆ ಮತ್ತು ಸರ್ಕಾರ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳಿಗೆ ತಮ್ಮ ಅಭಿಪ್ರಾಯಗಳನ್ನು ಮತ್ತು ಯುವ ಭಾರತೀಯ ಉದ್ಯಮಿಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಡುತ್ತಾರೆ. ಪ್ರಮುಖ ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು ಪರಿಹರಿಸಲು ಭಾರತವನ್ನು ಮಾತ್ರವಲ್ಲದೆ ಇಡೀ ಪ್ರಪಂಚವನ್ನು ಪ್ರೋತ್ಸಾಹಿಸಲು ಮತ್ತು ಪ್ರೇರೇಪಿಸಲು ಅವಕಾಶವನ್ನು ಹೊಂದಿರುತ್ತದೆ.

ನವ ದೆಹಲಿ
14 ಜನವರಿ 2021

DISCLAIMER: This is an approximate translation. The original is available in English on MEA’s website and may be referred to as the official press release.